# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2386 (2798)
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 29.03.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಮೂಲಭೂತ ಸೌಕರ್ಯವುಳ್ಳ "ಬಲ್ಕ್ ಡ್ರಗ್ ಪಾರ್ಕ್"ನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಭಾರತ ಸರ್ಕಾರವು Promotion of Drug Parks ಎಂಬ ಯೋಜನೆಯನ್ನು ದಿನಾಂಕ: 21.07.2020ರಂದು ಅಧಿಸೂಚಿಸಿದೆ. ಸದರಿ ಯೋಜನೆಯಡಿ ಭಾರತದಲ್ಲಿ ಒಟ್ಟು 3 ಬಲ್ಕ್ ಡ್ರಗ್ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರತಿ ಪಾರ್ಕ್‌ಗೆ ಯೋಜನಾ ವೆಚ್ಚದ ಶೇಕಡಾ 70ರಷ್ಟು ಗರಿಷ್ಠ ರೂ.1000 ಕೋಟಿ ಅನುದಾನವನ್ನು ಕೇಂದ್ರ ಸರ್ಕಾರವು ಒದಗಿಸುತ್ತದೆ. ಈ ಸಂಬಂಧ ಎಲ್ಲಾ ರಾಜ್ಯಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.<br><br>ಯಾದಗಿರಿ ಜಿಲ್ಲೆ, ಕಡೇಚೂರು ಮತ್ತು ಬಾಡಿಯಾಳ ಗ್ರಾಮಗಳ 3232-29 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿದ್ದು, ಸದರಿ ಜಮೀನಿನ ಪೈಕಿ ಸುಮಾರು 1500 ಎಕರೆ ಪ್ರದೇಶವನ್ನು ಬಲ್ಕ್ ಡ್ರಗ್ ಪಾರ್ಕ್‌ಗೆ ಮೀಸಲಿರಿಸಿದೆ.<br><br>ಅದರಂತೆ ಕಡೆಚೂರು ಕೈಗಾರಿಕಾ ಪ್ರದೇಶದ 1500 ಎಕರೆ ಪ್ರದೇಶದಲ್ಲಿ ಒಟ್ಟು ರೂ.1478 ಕೋಟಿ ವೆಚ್ಚದಲ್ಲಿ ಬಲ್ಕ್ ಡ್ರಗ್ ಪಾರ್ಕ್ ಸ್ಥಾಪನೆಗೆ ತಾತ್ವಿಕ ಅನುಮೋದನೆ |
| (ಆ) | ಯಾವ ಜಿಲ್ಲೆಯಲ್ಲಿ ಈ "ಬಲ್ಕ್ ಡ್ರಗ್ ಪಾರ್ಕ್" ನ್ನು ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ; ಇದಕ್ಕೆ ಪಡೆದಿರುವ ಪ್ರದೇಶ ಎಷ್ಟು; ಹಾಗೂ ಅಭಿವೃದ್ಧಿ ಕಾರ್ಯವು ಯಾವ ಹಂತದಲ್ಲಿದೆ; | |

| | | |
|---|---|---|
| | | ನೀಡಲು ಭಾರತ ಸರ್ಕಾರಕ್ಕೆ ದಿನಾಂಕ: 13.10.2020ರಂದು ರಾಜ್ಯ ಸರ್ಕಾರವು ಅರ್ಜಿಯನ್ನು ಸಲ್ಲಿಸಿದ್ದು, ಪ್ರಸ್ತಾವನೆಯ ಸಂಬಂಧ ಹೆಚ್ಚುವರಿ ಮಾಹಿತಿಯನ್ನು ದಿನಾಂಕ: 19.11.2020 ಹಾಗೂ 18.12.2021ರಂದು ಒದಗಿಸಲಾಗಿದೆ.<br><br>ಪ್ರಸ್ತುತ ಈ ಪ್ರಸ್ತಾವನೆ ಭಾರತ ಸರ್ಕಾರದಲ್ಲಿ ಪರಿಶೀಲನೆಯಲ್ಲಿದ್ದು, ಅನುಮೋದನೆ ದೊರೆತ ನಂತರ ನಿಯಮಾನುಸಾರ ಬಲ್ಕ್ ಡ್ರಗ್ ಪಾರ್ಕನ್ನು ಅಭಿವೃದ್ಧಿಪಡಿಸಲಾಗುತ್ತದೆ |
| (ಇ) | ಈ ಯೋಜನೆಗಾಗಿ ಒಟ್ಟು ವೆಚ್ಚವಾಗುವ ಹಣ ಎಷ್ಟು; ಇದರಲ್ಲಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು? (ಸಂಪೂರ್ಣ ವಿವರ ನೀಡುವುದು) | Bulk Drug Parkನ ಒಟ್ಟು ಯೋಜನಾ ವೆಚ್ಚ ರೂ.1478.00 ಕೋಟಿ ಆಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲಿನ ಮೊತ್ತ ರೂ.1000.00 ಕೋಟಿ ಹಾಗೂ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.478.00 ಕೋಟಿಗಳಾಗಿದೆ. |

ಸಂಖ್ಯೆ: ಸಿಐ 140 ಐಎಪಿ (ಇ) 2022

(ಡಾ॥ ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು